ಸಮಯದ ನಂತರ ಪಕ್ಷಿಗಳು ನೆಮ್ಮದಿಯಾಗಿದ್ದವು; ಸಹಜವಾಗಿ ಮೊಟ್ಟೆಗಳಿಗೆ ಕಾವು ಕೊಡುತ್ತಾ ನಮ್ಮ ಮತ್ತು ಬೆಕ್ಕಿನ ಚಲನವಲನಗಳನ್ನು ಗಮನಿಸುತ್ತಾ ತನ್ನ ಸಹಜಕ್ರಿಯೆಯಲ್ಲಿ ತೊಡಗಿದ್ದವು. ಹಾಗೂ ಹೀಗೂ ಹತ್ತು ಹದಿನೈದು ದಿನ ಕಳೆದುಹೋದವು. ಪಕ್ಷಿಗಳ ಚಿಲಿಪಿಲಿ ಹಾಡು ಕೇಳುತ್ತಾ, ನನ್ನ ಕೆಲಸಗಳನ್ನು ಮಾಡಿಕೊಂಡು ಸಹಜವಾಗಿದ್ದೆ. ಇನ್ನೊಂದೆರಡು ದಿನಗಳಲ್ಲಿ ಮೊಟ್ಟೆ ಒಡೆದು ಮರಿಗಳು ಹೊರ ಬರಬಹುದೆಂಬ ಲೆಕ್ಕಾಚಾರ ನನ್ನೊಳಗೆ ಮೂಡಿತು, ಆದರೆ ಒಂದು ಬೆಳಿಗ್ಗೆ ಸಂಗಾತಿ ರಜನಿ ಬೆಳಗೆದ್ದು ಮಹಡಿಯ ಮೆಟ್ಟಿಲ ಮೇಲೆ ಚೆಲ್ಲಾಡಿದ್ದ ರೆಕ್ಕೆಪುಕ್ಕಗಳನ್ನು ನೋಡಿ ಗಾಬರಿಗೊಂಡು 'ನೋಡ ಬನ್ನಿ, ಏನಾಗಿದೆ' ಎಂದು ಕರೆದುಕೊಂಡು ಹೋಗಿ ಇದು ನಮ್ಮ 'ಮಿಯಾಂವ್ ಮಾಡಿದ ಕೆಲಸವೇ, ರಾತ್ರಿ ಪಕ್ಷಿಯನ್ನು ಹಿಡಿದು ತಿಂದು ಹಾಕಿದೆ. ಈಗ ಏನು ಮಾಡೋಣ ಮೊಟ್ಟೆಗಳಿವೆ, ಆ ಇನ್ನೊಂದು ಹಕ್ಕಿ ಬೆಳಗಿನಿಂದಲೇ ಜೋರಾಗಿ ಹಾಡುತ್ತಾ ರೋದಿಸುತ್ತಿದೆ' ಎಂದರು.

ಅಷ್ಟೇ ಅಲ್ಲದೆ 'ಮಗಳಿಗೆ ಹೇಳಬೇಡಿ, ಬೇಸರ ಮಾಡಿಕೊಳ್ಳುತ್ತಾಳೆ. ಆ ಮೊಟ್ಟೆಗಳ ಪಾಡು ಏನಾಗುತ್ತದೊ ಗೊತ್ತಿಲ್ಲ' ಎಂದು ಬೆಳ್ಳಂಬೆಳಗ್ಗೆ ಮೂಡ್ ಆಫ್ ಮಾಡಿಕೊಂಡಿದ್ದರು. ನುಗ್ಗೆ ಮರ, ಆಕಾಶ ಮಲ್ಲಿಗೆ, ಸೀಬೆ ಗಿಡ, ಸರ್ವಸಾಂಬಾರ ಗಿಡ, ಹೊಂಗೆ ಮರ, ದೇವಕಣಗಿಲೆ ಗಿಡ ಮರದ ಟೊಂಗೆಗಳಿಗೆ ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ಹಾರುತ್ತಾ ತನ್ನ ಸಂಗಾತಿಗಾಗಿ ಆ ಹೆಣ್ಣು ಟಿಕಲ್ಸ್ ಬ್ಲೂ ಫ್ಲೈ ಕ್ಯಾಚರ್ ಹಾಡುವ ಧ್ವನಿಯಲ್ಲಿ ಕೂಗುತ್ತಾ ರೋದಿಸುತ್ತಾ ಸುತ್ತಲೂ ಗಮನಿಸುತ್ತ ತನ್ನ ಸಂಗಾತಿಗಾಗಿ ಪರಿತಪಿಸುತ್ತಿದ್ದ ಹೆಣ್ಣು ಪಕ್ಷಿಯ ಹುಡುಕಾಟ ಮೂರ್ನಾಲ್ಕು ದಿನ ನಡೆದೇ ಇತ್ತು. ಅಷ್ಟರಲ್ಲಿ ಮೊಟ್ಟೆಯಿಂದ ಹೊರ ಬಂದ ಮರಿಗಳು ಹೊಸ ಜಗತ್ತನ್ನು ಪಿಳಿಪಿಳಿ ಕಣ್ಣುಗಳಿಂದ ನೋಡಲಾರಂಭಿಸಿದ್ದವು. ತನ್ನದೇ ಧ್ವನಿಯಲ್ಲಿ ಅಪ್ಪ ಅಮ್ಮನ ಪ್ರೀತಿಗೆ ಹಂಬಲಿಸಿದಂತೆ ಪುಟ್ಟ ಗೂಡೊಳಗೆ ಚಿಂವ್ ಚಿಂವ್ ಎನ್ನುವ ಧ್ವನಿಯೇ ನನ್ನೊಳಗೆ ಬೇಸರ ಮೂಡಿಸುತ್ತಿದ್ದವು.



ಮೂರು ಮೊಟ್ಟೆಗಳಲ್ಲಿ ಮೂರು ಮರಿಗಳು ಹೊರಬಂದಿದ್ದವು. ಕೆಲವೊಮ್ಮೆ ಮೊಟ್ಟೆಗಳು ಕೆಟ್ಟುಹೋಗುತ್ತವೆ. ತಾಯಿ ಗೂಡಿನತ್ತ ಬಂದಾಕ್ಷಣ ಆಹಾರಕ್ಕಾಗಿ ಬಾಯಿ ತೆರೆದು ಚಿಂವ್ ಚಿಂವ್ ಎನ್ನುವ ಧ್ವನಿ ಕೇಳಿಸಿಕೊಳ್ಳುವುದೇ ಒಂದು ಮಾದಕ ಅನುಭವ. ಅಂತೂ ಇಂತೂ ಮರಿಗಳ ರೆಕ್ಕೆ ಒಂದು ವಾರದಲ್ಲೇ ಬಲಿತೇ ಬಿಟ್ಟವು. ಕೊನೆಯ ಒಂದೆರಡು ದಿನಗಳಲ್ಲಿ ಗೂಡು ಬಿಟ್ಟು ಹಾರಬಲ್ಲವೆಂದು ಅಂದಾಜಿಸಿ ನನ್ನ ಮತ್ತು ಆ ಪಕ್ಷಿಗಳ ಒಡನಾಟದ ನೆನಪಿಗಾಗಿ ಒಂದೆರಡು ಚಿತ್ರ ತೆಗೆದು ಬಿಡೋಣ ಎಂದುಕೊಂಡು ಇಡೀ ಒಂದು ದಿನ ಚಿತ್ರೀಕರಣದಲ್ಲಿ ತೊಡಗಿಸಿಕೊಂಡೆ. ಆ ಮೂರು ಮರಿಗಳಿಗೆ ತಿನ್ನಿಸಿ ಉಣ್ಣಿಸಿ, ಬಳಲಿ ಬೆಂಡಾಗಿದ್ದ ತಾಯಿ ಹಕ್ಕಿಯ ಹರಸಾಹಸ ಗಮನಿಸುತ್ತಲೇ ಒಂದಷ್ಟು ಚಿತ್ರಗಳನ್ನು ದಾಖಲಿಸಿಕೊಳ್ಳುತ್ತಿದ್ದೆ.

ಆಗ ಒಂದು ಮಧ್ಯಾಹ್ನ ಸಂಗಾತಿ ರಜನಿಯಿಂದ ಫೋನ್ ರಿಂಗಣಿಸಿತು. 'ಅಹಮದಾಬಾದ್‌ನಲ್ಲಿ ಫ್ಲೈಟ್ ಕ್ರ್ಯಾಶ್ ಆಗಿ ನೂರಾರು ಜೀವಗಳು ಬಲಿಯಾಗಿವೆ. ಮೆಡಿಕಲ್ ಹಾಸ್ಟೆಲ್ ಮೇಲೆ ಫ್ಲೈಟ್ ಬಿದ್ದು ವೈದ್ಯವಿದ್ಯಾರ್ಥಿಗಳೆಲ್ಲ ಸತ್ತಿದ್ದಾರೆ. ಇದೊಂದು ರಾಷ್ಟ್ರೀಯ ದುರಂತ' ಎಂದು ಒಂದೇ ಉಸಿರಿನಲ್ಲಿ ವರದಿ ನೀಡುತ್ತಿದ್ದರು. ಯಾರ ಬದುಕು ಎಲ್ಲೋ ಹೇಗೋ ಏನೋ ಹಾಗೆಯೇ ಸಾವು ಕೂಡ ಎಂದು ಚಿಂತಿಸುತ್ತಲೇ ಪಕ್ಷಿಗಳನ್ನೇ ಗಮನಿಸುತ್ತಾ ರೆಕ್ಕೆ ಬಲಿತ ಈ ಪಕ್ಷಿಗಳು ಇನ್ನೊಂದು ವಾರದಲ್ಲಿ ರೆಂಬೆಯಲ್ಲಿ ಹಾರುವಂಥಾದರೆ ಜೀವಕ್ಕೆ ಅಪಾಯವಿಲ್ಲ, ಗೂಡಿನಿಂದ ಹೊರಬಂದಾಗ ಕೂಡ ತಾಯಿ ಪಕ್ಷಿ ತನ್ನ ಮರಿಗಳಿಗೆ ಆಹಾರ ಹುಡುಕಿಕೊಳ್ಳುವುದನ್ನು ಹಾಗೂ ಶತ್ರು ಪ್ರಪಂಚದಿಂದ ಪಾರಾಗುವುದನ್ನು ಕಲಿಸಬೇಕು. ಇದೆಲ್ಲಾ ಸಾಧ್ಯವಾದರೆ ನಮ್ಮನೆಯ ಆಲಂಕಾರಿಕ ಮಣ್ಣಿನ ದೀಪದ ಗೂಡು ನೇತು ಹಾಕಿದ್ದಕ್ಕೆ ಸಾರ್ಥಕ ಭಾವ ಮೂಡುತ್ತದೆ ಎಂದುಕೊಂಡೆ.

ಪಕ್ಷಿಗಳು ಬಂದು ಗೂಡು ಕಟ್ಟಿ ಸಂಸಾರ ನಡೆಸಲೆಂದು ಮನೆಯ ಸುತ್ತಲ ಹೊರ ಗೋಡೆಗಳಲ್ಲಿ ಪುಟ್ಟ ಪುಟ್ಟ ಮಡಿಕೆಗಳನ್ನು ಇಟ್ಟು ಪಕ್ಷಿಗಳು ಗೂಡು ಮಾಡಲೆಂಬ ನನ್ನ ಕನಸಿಗೆ ಸಾರ್ಥಕ ಭಾವ ಮೂಡಿದಂತಾಗುತ್ತದೆ ಎಂದುಕೊಂಡೆ. ಮನೆಯ ಹೊರಗೋಡೆಯಲ್ಲಿ ಸಂತಾನ ಮಾಡಿಕೊಂಡು ಹಾರಿ ಹೋದ ಪಕ್ಷಿಗಳೆಷ್ಟು. ಆದರೆ ಮನೆಯ ಬಾಗಿಲ ದೀಪದ ಕೋಣೆಯಲ್ಲೇ ಸಂಸಾರ ನಡೆಸಲು ಬಂದು ಅಪ್ಪನಿಲ್ಲದ ಮರಿ ಪಕ್ಷಿಗಳ ಜೀವನ ಯಶೋಗಾಥೆ ಜೀವಪರವಾಗುವುದು ಎಷ್ಟು ಚೆಂದ. ಗಂಡು ಸಂಗಾತಿ ಇಲ್ಲದೆ ತನ್ನ ಮಕ್ಕಳಿಗೆ ಜೀವ ತೇದು ಹೋದ ಹೆಣ್ಣು ಹಕ್ಕಿಯ ಯಶೋಗಾಥೆ ನಮಗೆ ಸ್ಫೂರ್ತಿ ಅಲ್ಲವೇ? ಎಂದೆಲ್ಲ ರಾತ್ರಿ ಮಲಗುವ ಮುನ್ನ ಚಿಂತಿಸುತ್ತಿದ್ದೆ.

ಬೆಳಗ್ಗೆ ನಾನು ಎಚ್ಚರಗೊಂಡಾಗ ನಿತ್ಯದಂತೆ ಚಿವ್ ಚಿವ್ ಸದ್ದು ಜೋರಾಗಿತ್ತು. ಬಾಗಿಲ ತೆರೆದು ಮರಿಗಳನ್ನು ನೋಡಲು ಹೊರಬಂದಾಗ ಅಮ್ಮ ಗೂಡಿನಿಂದ ಮರಿಗಳು ಹೊರಬರಲು ಬಾಯಿಯಲ್ಲಿ ಹುಳ ಹುಪ್ಪಟೆಗಳನ್ನು ಇಟ್ಟುಕೊಂಡು ಕರೆಯುತ್ತಿದ್ದಳು. ಸುಮಾರು ಹೊತ್ತು ಹಾಗೆಯೇ ಗಮನಿಸುತ್ತಿದ್ದೆ. ಮರಿಗಳು ಗೂಡಿನಿಂದ ಹೊರಬರಲಿಲ್ಲ .ಅಮ್ಮ ಗೂಡಿಗೆ ಹೋಗಿ ಆಹಾರ ಕೊಡಲಿಲ್ಲ. ಅಮ್ಮ ಹಕ್ಕಿಯು ಕರೆಯುತ್ತಲೇ ಇದ್ದಳು, ನಾನು ಕಾಫಿ ಕುಡಿದು ಹೂಕುಂಡ ಗಿಡಗಳಿಗೆ ನೀರು ಹಾಕುತ್ತಲೇ ನಿತ್ಯದ ಕಾಯಕದಲ್ಲಿ ಮುಳುಗಿದ್ದೆ, ಹೊರಬಂದು ನೋಡಿದಾಗ ಎರಡು ಮರಿಪಕ್ಷಿಗಳು ಗೂಡಿನಿಂದ ಹೊರ ಅಂಗಳಕ್ಕೆ ನೆಗೆದಿದ್ದವು. ಅಮ್ಮ ಹಕ್ಕಿಯು ನೆಲದಲ್ಲಿದ್ದ ಮರಿಗಳಿಗೆ ಗುಟುಕು ನೀಡುತ್ತಿತ್ತು. ಕೊನೆಯ ಇನ್ನೊಂದು ಮರಿ ಗೂಡಿನಲ್ಲಿ ಇದ್ದು ಹೊರ ನೆಗೆಯಲು ಭಯಗೊಂಡಿತು. ಅಮ್ಮ ಪಕ್ಷಿ ತನ್ನ ಮರಿಗಳನ್ನು ಸುರಕ್ಷಿತ ಸ್ಥಳಕ್ಕೆ ಕರೆದುಕೊಂಡು ಹೋಗಲು ದೂರದಿಂದ ನಿಂತು ಕರೆಯುತ್ತಾ ಹಾಗೆಯೇ ಮತ್ತೆ ಮತ್ತೆ ಕರೆಯುತ್ತ ಸುರಕ್ಷಿತ ತಾಣಕ್ಕೆ ಕರೆದೊಯ್ಯುತ್ತಿತ್ತು.

ಸುಮಾರು ಹನ್ನೊಂದರ ಸಮಯಕ್ಕೆ ಮೂರು ಮರಿಗಳು ಗೂಡಿನಿಂದ ಹೊರ ಹಾರಿದ್ದವು. ಅಂದು ಸಂಜೆಯವರೆಗೆ ತಾಯಿ ಪಕ್ಷಿ ಆಹಾರ ಕೊಡಲು ಅಲ್ಲಲ್ಲಿ ಓಡಾಡಿಕೊಂಡಿತ್ತು, ಮರಿಗಳು ಚಿಂವ್ ಚಿಂವ್ ಸದ್ದು ಕೇಳಿಸುತ್ತಿತ್ತಷ್ಟೆ. ಕಣ್ಣಿಗೆ ಗೋಚರಿಸುತ್ತಿರಲಿಲ್ಲ. ಯಾವುದೋ ಪೊದೆಯೊಳಗೆ ಸುರಕ್ಷಿತವಾಗಿದ್ದವು. ಅಂದು ಮಾರನೆ ಬೆಳಿಗ್ಗೆ ಕೂಡ ಶಬ್ದ ಮಾತ್ರ ಕೇಳಿಸುತ್ತಿದ್ದು ಮರಿಗಳು ಗೋಚರಿಸುತ್ತಿರಲಿಲ್ಲ.

ಇಂದು ಅಮ್ಮ ಹಕ್ಕಿಯ ಹಾಡಾಗಲಿ ಮರಿ ಪಕ್ಷಿಗಳ ಚಿಂವ್ ಚಿಂವ್ ಎನ್ನುವ ಧ್ವನಿಯಾಗಲಿ ಕೇಳಿಸುತ್ತಿಲ್ಲ. ಇಂಪಾದ ಜೀವ ಪರವಾದ, ಜೀವ ಪ್ರೀತಿಯ ಧ್ವನಿ ಕೇಳಿಸದಂತಾಗಿ ನನ್ನೊಳಗೆ ಅನಾಥ ಭಾವ ಮನಸ್ಸನ್ನಾವರಿಸಿದೆ. ಎಲ್ಲಿಂದಲೋ ಬಂದ ಗಂಡುಹೆಣ್ಣು ಪಕ್ಷಿ ನಮ್ಮನೆಯ ಆವರಣದಲ್ಲಿ ಒಂದಾಗಿ ಮರಿಗಳೊಂದಿಗೆ ಹಾರಿ ಹೋಗಬೇಕಿದ್ದ ಸಂಸಾರದೊಳಗೆ ಹೆಣ್ಣು ಹಕ್ಕಿ ಮಾತ್ರ ತನ್ನ ಮರಿಗಳೊಂದಿಗೆ ಬದುಕ ಕಟ್ಟಿಕೊಂಡು ಹೋಗಿದ್ದು ಒಂದೆಡೆ ಸಂತಸವಾದರು. ಜೀವಜಾಲದೊಳಗೆ ನಿಸರ್ಗ ಸಹಜ ಜೀವನದಲ್ಲಿ ಬಲಿಯಾದ ಗಂಡು ಹಕ್ಕಿಯ ದುರಂತ ಸಾವು ಮರೆಯಲಾಗುತ್ತಿಲ್ಲ. ■